6. ಬೆಂಗಳೂರು ಮಹಾನಗರ ಪಾಲಿಕೆಯಿಂದ 25 ಕಿ.ಮೀ. ನಗರಸಭೆ ವ್ಯಾಪ್ತಿಯಿಂದ 10 ಕಿ.ಮೀ. ಮತ್ತು ಪುರಸಭೆ ವ್ಯಾಪ್ತಿಯಿಂದ 5 ಕಿ.ಮೀ. ಮಿತಿಯೊಳಗೆ ಜಮೀನು ಮಂಜೂರಿ ಮಾಡತಕ್ಕದ್ದಲ್ಲ.

7. ಕರ್ನಾಟಕ ಭೂ ಕಂದಾಯ ನಿಯಮಗಳು 1966 ನಿಯಮ 97(1) ರಂತೆ ಗ್ರಾಮದಲ್ಲಿ 100 ರಾಸುಗಳು ಇದ್ದರೆ 30–00 ಎಕರೆ ಜಮೀನು ರಾಸುಗಳಿಗಾಗಿ ಕಾಯ್ದಿರಿಸಬೇಕಾಗುತ್ತದೆ. ಕರ್ನಾಟಕ ಭೂಕಂದಾಯ ನಿಯಮಗಳು 1966 ನಿಯಮ 97 ರಂತೆ ಪರಿಶೀಲಿಸಿ ಹೆಚ್ಚುವರಿ ಗೋಮಾಳ ಜಮೀನಿದ್ದಲ್ಲಿ ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದಲ್ಲಿ ಅಂತಹ ಜಮೀನುಗಳನ್ನು ನಿಯಮಾನುಸಾರ ಪರಿಶೀಲಿಸಿ ಸಕ್ರಮಗೊಳಿಸಲಾಗುವುದು.

ಹೊಸ ತಾಲ್ಲೂಕು ಕೇಂದ್ರ ಪುನರಚನೆ

2110 (2704); ಶ್ರೀ ಚಿಕ್ಕಮಾದು ಎಸ್. (ಹೆಚ್.ಡಿ.ಕೋಟೆ)

ಅ) ರಾಜ್ಯದಲ್ಲಿ ಹಿಂದೆ 34 ಹೊಸ ತಾಲ್ಲೂಕು ಕೇಂದ್ರಗಳನ್ನು ಪುನರ್ ರಚಿಸುವ ಬಗ್ಗೆ ಸರ್ಕಾರದ ನಿಲುವೇನು;

ಆ) ಯಾವ ಮಾನದಂಡದ ಆಧಾರದ ಮೇಲೆ ಹೊಸ ತಾಲ್ಲೂಕು ಕೇಂದ್ರ ರಚಿಸಲಾಗುವುದು;

ಇ) ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ತಾಲ್ಲೂಕಿನ ಸರಗೂರನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಲು ಈ ಹಿಂದಿನ ವರದಿ ಶಿಫಾರಸ್ಸಿನ ಮೇರೆಗೆ ಸರ್ಕಾರ ಕೈಗೊಂಡಿರುವ ನಿಲುವೇನು;

ಈ) ಅಸಂಖ್ಯಾತ ರೈತರು ಜಮೀನು ದುರಸ್ಥಿಗಾಗಿ ಅರ್ಜಿ ಸಲ್ಲಿಸಿದರೂ ಪೋಡಿ ದುರಸ್ತಿಯಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು)

ಅ)&(ಆ)&(ಇ) 2013–14ನೇ ಸಾಲಿನ ಫೆಬ್ರವರಿ ಮಾಹೆಯ ಆಯವ್ಯಯದಲ್ಲಿ 43 ತಾಲ್ಲೂಕುಗಳ ಘೋಷಣೆಯನ್ನು ಮಾಡಲಾಗಿರುತ್ತದೆ ಹಾಗೂ ಮೈಸೂರು ಜಿಲ್ಲೆಯ ಸರಗೂರು ಈ ಘೋಷಣೆಯಲ್ಲಿ ಸೇರಿರುವುದಿಲ್ಲ. ಇದೇ ಸಾಲಿನ ಜುಲೈ ಮಾಹೆಯ ಆಯವ್ಯಯದಲ್ಲಿ ಎಲ್ಲ ದೃಷ್ಟಿಕೋನಗಳಿಂದ ಪರಾಮರ್ಶಿಸಿ ಹಂತ ಹಂತವಾಗಿ ಹೊಸ ತಾಲ್ಲೂಕುಗಳನ್ನು ರಚಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ಘೋಷಿಸಲಾಗಿರುತ್ತದೆ. ಮುಂದುವರೆದು 2014–15ನೇ ಸಾಲಿನ ಆಯವ್ಯಯದಲ್ಲಿ ಹೊಸ ತಾಲ್ಲೂಕುಗಳ ರಚನೆಗೆ ಸಂಬಂಧಿಸಿದಂತೆ ಯಾವುದೇ ಘೋಷಣೆ ಮಾಡಲಾಗಿರುವುದಿಲ್ಲ. ಮುಂದಿನ ದಿನಗಳಲ್ಲಿ ಹೊಸ ತಾಲ್ಲೂಕುಗಳ ರಚನೆ ಬಗ್ಗೆ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು. ನೂತನ ತಾಲ್ಲೂಕು ರಚನೆ ಮಾಡಲು ಯಾವುದೇ ನಿರ್ದಿಷ್ಟ ಮಾರ್ಗಸೂಚಿಗಳು ಇರುವುದಿಲ್ಲ. ಆದಾಗ್ಯೂ ತಾಲ್ಲೂಕು ರಚನೆಗೆ ನೇಮಿಸಲಾಗಿದ್ದ ಸಮಿತಿ/ಆಯೋಗಗಳು ಆ ಪ್ರದೇಶದ ವಿಸ್ತೀರ್ಣ ಮತ್ತು ಜನಸಂಖ್ಯೆ ಹಾಗೂ ಜನಸಂಖ್ಯೆಯಲ್ಲಿನ ವಿವಿಧ ವರ್ಗಗಳ ವಸ್ತುಸ್ಥಿತಿ, ನೀರಾವರಿ, ಯೋಜನೆಗಳ ಪ್ರಗತಿ, ಔದ್ಯೋಗಿಕ, ಕೃಷಿ ಕ್ಷೇತ್ರಗಳಲ್ಲಿ ಮುಂದಿನ ದಶಕಗಳಲ್ಲಿ ಆಗಬಹುದಾದ ಬೆಳವಣಿಗೆಗಳನ್ನು ಮತ್ತತರ ಅಂಶಗಳನ್ನು ಪರಿಗಣಿಸುವಂತೆ ಶಿಫಾರಸ್ಸು ಮಾಡಿರುತ್ತವೆ.

ಈ) ಬಂದಿರುತ್ತದೆ.

- ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆಯಲ್ಲಿ ಖಾಲಿ ಇದ್ದ 1834 ಭೂಮಾಪಕರ ನೇಮಕಾತಿಯನ್ನು ಮಾಡಲಾಗಿದ್ದು, ಪ್ರಸ್ತುತ ವೃತ್ತಿ ತರಬೇತಿಯಲ್ಲಿರುವ ಭೂಮಾಪಕರು ಆಗಸ್ಟ್ ತಿಂಗಳಲ್ಲಿ ಸೇವೆಗೆ ಲಭ್ಯವಾಗುತ್ತಾರೆ. ಜಿಲ್ಲೆಗೆ ಸುಮಾರು 50 ಮಂದಿಯನ್ನು ನೇಮಿಸಲು ಉದ್ದೇಶಿಸಿದ್ದು, ಹಾಲಿ ಇರುವ 20

ಅಡವಿ ಭೂಮಾಪಕರು ಸೇರಿ ಒಟ್ಟು 70 ಭೂಮಾಪಕರು ತಿಂಗಳಿಗೆ ತಲಾ 23 ಪ್ರಕರಣಗಳಂತೆ (70x23=1610) ಮುಂದಿನ 6 ತಿಂಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ಶೀಘ್ರವಾಗಿ ವಿಲೇ ಮಾಡಲಾಗುವುದು.

- ಕಂದಾಯ ಇಲಾಖೆಯಲ್ಲಿ ಸರ್ಕಾರಿ ಜಮೀನುಗಳಲ್ಲಿ ಮಾಡಿರುವ ಭೂಮಂಜೂರಾತಿ, ಗುತ್ತಿಗೆ, ನಮೂನೆ–50, 53 ರಲ್ಲಿ ಮಂಜೂರಿ ಮತ್ತು ಭೂಸ್ವಾಧೀನ ಪ್ರಕರಣಗಳ ಬಗ್ಗೆ, ಮೂಲ ಕಡತಗಳ ಆಧಾರದ ಮೇಲೆ ನಮೂನೆ–1 ರಿಂದ 5 ನ್ನು ಭರ್ತಿ ಮಾಡುವ ಬಗ್ಗೆ ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಕಂದಾಯ ಅಧಿಕಾರಿಗಳಿಗೆ ಕಾರ್ಯಾಗಾರವನ್ನು ಏರ್ಪಡಿಸಿ ಶೀಘ್ರ ಕ್ರಮಕ್ಕೆ ಸೂಚಿಸಿದೆ.

- ಸರ್ವೆ ಮತ್ತು ಪಹಣಿ ದಾಖಲೆಗಳಲ್ಲಿ ನ್ಯೂನ್ಯತೆ ಇಲ್ಲದ ಪ್ರಕರಣಗಳನ್ನು 30 ದಿನಗಳ ಒಳಗೆ ಅಳತೆ ಮಾಡಲು ಸೂಚನೆ ನೀಡಲಾಗಿದೆ.

- ಸರ್ಕಾರಿ ಭೂಮಾಪಕರು ಮತ್ತು ಪರವಾನಗಿ ಭೂಮಾಪಕರು ತಿಂಗಳಲ್ಲಿ ಕಡ್ಡಾಯವಾಗಿ 23 ಕಡತಗಳ ವಿಲೇವಾರಿ ಪ್ರಗತಿ ನೀಡುವಂತೆ ಸೂಚಿಸಿದೆ.

- ಇಲಾಖೆಯಲ್ಲಿ ವೈಜ್ಞಾನಿಕ ತಂತ್ರಜ್ಞಾನವನ್ನು ಬಳಸುವ ದೃಷ್ಟಿಯಿಂದ (ETS) Electronic Total Station ಮತ್ತು Differential Global Positioning System ಉಪಕರಣಗಳನ್ನು ಖರೀದಿಸಲು ಯೋಜಿಸಿದ್ದು ಟೆಂಡರ್ ಆದೇಶ ನೀಡಲಾಗಿದೆ.

- ಮೋಜಿಣಿ ತಂತ್ರಾಂಶದಲ್ಲಿ Mojini V2 ಅನ್ನು ಜಾರಿಗೆ ತಂದಿದ್ದು, ಬಾಕಿ ಇರುವ ಕಡತಗಳ ವಿಲೇವಾರಿ ದೃಷ್ಟಿಯಿಂದ ಸರ್ಕಾರಿ ಭೂಮಾಪಕರಿಗೂ ಸಹ ಲಾಗಿನ್ ಸೌಕರ್ಯವನ್ನು ಕಲ್ಪಿಸಲು ತೀರ್ಮಾನಿಸಿದೆ.

- ಕಡತ ವಿಲೇವಾರಿಗಾಗಿ ಖಾಸಗಿ ಸಂಸ್ಥೆಗಳ ಸಹಯೋಗದೊಂದಿಗೆ ಹೆಚ್ಚಿನ ಕಡತಗಳು ಬಾಕಿ ಇರುವ ಗ್ರಾಮಗಳನ್ನು ಆಯ್ಕೆ ಮಾಡಿ ಅಳತೆ ಕಾರ್ಯ ಪ್ರಾಯೋಗಿಕವಾಗಿ ಪ್ರಾರಂಭಿಸಲು ಯೋಜಿಸಿದ್ದು. ಅದರಂತೆ ಬಿಜಾಪುರ ಜಿಲ್ಲೆ. ಬಸವನ ಬಾಗೇವಾಡಿ ತಾಲ್ಲೂಕಿನ ಇಂಗಳೇಶ್ವರ ಗ್ರಾಮದಲ್ಲಿ ಅಳತೆ ಕಾರ್ಯ ಪ್ರಾರಂಭಿಸಲಾಗಿದೆ.

ಭೂ ಮಂಜೂರಾತಿ

2111 (3160); ಶ್ರೀ ಚಿಕ್ಕಮಾದು ಎಸ್.

ಅ) ಹೆಗ್ಗಡ ದೇವನ ಕೋಟೆ ತಾಲ್ಲೂಕಿನಲ್ಲಿ ನಮೂನೆ 50/53 ರಲ್ಲಿ ಸ್ವೀಕೃತವಾಗಿರುವ ಅರ್ಜಿಗಳ ಪೈಕಿ – ಎಷ್ಟು ಅರ್ಜಿ ಸಕ್ರಮಗೊಳಿಸಲಾಗಿದೆ ಹಾಗೂ ಸಕ್ರಮಗೊಳಿಸಲು ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು ಬಾಕಿ ಅರ್ಜಿಗಳನ್ನು ಸಕ್ರಮಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಆ) ನಮೂನೆ 50/53 ರಲ್ಲಿ ಅರ್ಜಿ ಸಲ್ಲಿಸಿ, ಮಂಜೂರಾತಿ ಪಡೆದ ರೈತರು ಸಾಗುವಳಿ ಚೀಟಿ ಪಡೆಯದೆ ಇರುವ ಎಷ್ಟು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಂಡಿದೆ;

ಇ) ತಾಲ್ಲೂಕು ಅಕ್ರಮ–ಸಾಗುವಳಿ ಸಕ್ರಮ ಸಮಿತಿಯಿಂದ ನಮೂನೆ 50/53 ರಲ್ಲಿ ಅರ್ಜಿ ಸಲ್ಲಿಸಿರುವ ರೈತರು ಭೂ ಮಂಜೂರಾತಿ ಪಡೆದಿದ್ದು, ಕಾರಣಾಂತರಳಿಂದ ಸಾಗುವಳಿ ಚೀಟಿ ಪಡೆಯದೆ ಇರುವ ಎಷ್ಟು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ; ಹಾಗಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ.

ಈ) ಅಕ್ರಮ–ಸಾಗುವಳಿ ಸಕ್ರಮ ಸಮಿತಿಯಿಂದ ಭೂ ಮಂಜೂರಾತಿ ಪಡೆದ ರೈತರು ಖಾತೆಯಾಗಿಲ್ಲದ ಎಷ್ಟು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ; ಹಾಗಿದ್ದಲ್ಲಿ, ಖಾತೆ ಮಾಡುವ ಬಗ್ಗೆ ಸರ್ಕಾರ ಯಾವ ಕ್ರಮ